132) Shri. Vidyadhiraj Polytechnic, Kumta.

133) R.N.Shetty Polytechnic, Sirsi.

134) Mahasate Polytechnic, Karwar.

135) R.N.Shetty Rural Polytechnic, Murudeshwar.

ಹಳದಿ ಕಾರ್ಡುಗಳ ಯೋಜನೆ

1513 -ಶ್ರೀ ಹೆಚ್. ಡಿ. ಬಸವರಾಜ್ (ವಿರಾಜಪೇಟೆ) : ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಹಳದಿ ಕಾಡ್ ಯೋಜನೆಯನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಸಲುವಾಗಿ ತಂದಿದ್ದ, ಈವರೆಗೆ ಎಷ್ಟು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಿರುತ್ತದೆ?

ಆ) ಈ ಯೋಜನೆಯ ಅನ್ವಯ ಈವರೆಗೆ ಎಷ್ಟು ಹಣವನ್ನು ವೆಚ್ಚ ಮಾಡಲಾಗಿದೆ?

ಇ) ಹಳದಿ ಕಾರ್ಡ್ ಯೋಜನೆಯನ್ನು ರಾಜ್ಯದಲ್ಲಿ ಸಂಪೂರ್ಣ ಜಾರಿಗೆ ತರಲು ಸರ್ಕಾರವು ಯಾವ ಕ್ರಮ ಹಮ್ಮಿಕೊಂಡಿದೆ?

ಡಾ॥ ಹೆಚ್.ಸಿ. ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ) :

ಅ) ಹಳದಿ ಕಾರ್ಡ್ ಯೋಜನೆಯನ್ನು ಮೊದಲು ರಾಜ್ಯದ ಮೈಸೂರು, ಹಾಸನ, ಕೋಲಾರ, ಬಿಜಾಪುರ ಮತ್ತು ರಾಯಚೂರು ಜಿಲ್ಲೆಗಳಲ್ಲಿ ಪ್ರಾಯೋಗಿಕವಾಗಿ ಕಾರ್ಯರೂಪಕ್ಕೆ ತರಲಾಗಿತ್ತು. ಈಗ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಈ ಯೋಜನೆಯನ್ನು ವಿಸ್ತರಿಸಲು ದಿನಾಂಕ 25-7-1997 ರಂದು ಆದೇಶ ಹೊರಡಿಸಲಾಗಿದೆ.

ಆ) ವಿಶ್ವಬ್ಯಾಂಕ್ ನೆರವಿನ ಕರ್ನಾಟಕ ಆರೋಗ್ಯ ವ್ಯವಸ್ಥೆ ಅಭಿವೃದ್ಧಿ ಯೋಜನೆ ವತಿಯಿಂದ ಈವರೆಗೆ ಈ ಸಂಬಂಧದಲ್ಲಿ ರೂ. 96,100/- ವೆಚ್ಚ ಮಾಡಲಾಗಿರುತ್ತದೆ. 1995-96ರಲ್ಲಿ ರಾಜ್ಯ ಸರ್ಕಾರದ ಯೋಜನಾ ವೆಚ್ಚದಲ್ಲಿ ರೂ. 39.38 ಲಕ್ಷ ಖರ್ಚು ಮಾಜಲಾಗಿದೆ.

ಇ) ಈ ಯೋಜನೆಯನ್ನು ಕಾರ್ಯರೂಪಕ್ಕೆ ತರಲಾಗಿರುವ 5 ಜಿಲ್ಲೆಗಳೂ ಸೇರಿದಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿಯೂ ಈ ಯೋಜನೆಯನ್ನು ಕಾರ್ಯಗತಗೊಳಿಸಲು ಕ್ರಮ ಕೈಗೊಂಡಿದ್ದ 1997-98ನೇ ಸಾಲಿನಲ್ಲಿ ಒಟ್ಟು ರೂ.5.41 ಕೋಟಿ ವೆಚ್ಚದಲ್ಲಿ ಯೋಜನೆಯನ್ನು ಜಾರಿಗೊಳಿಸಲು ಆದೇಶ ಹೊರಡಿಸಲಾಗಿದೆ.